# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 05.12.2017 ರಂದು ಪೂರ್ವಾಹ್ನ ಗಂಟೆ 10:30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಮಾನ್ಯ ಕುಲಪತಿಯವರು ಪ್ರಾರಂಭದಲ್ಲಿ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಪ್ರಾರಂಭಿಕ**

1. ಮಾನ್ಯ ಕುಲಪತಿಯವರು, ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡ ಡಾ.ಯು.ತಾರಾ ರಾವ್, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾವೂರು, ಮಂಗಳೂರು ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡ ಶ್ರೀಮತಿ ಸುಮಾ ಎಸ್.ರೈ, ಪ್ರಾಂಶುಪಾಲರು, ಡಾ.ಎಂ.ವಿ.ಶೆಟ್ಟಿ ಕಾಲೇಜ್ ಆಫ್ ಸೋಷಿಯಲ್ ವರ್ಕ್, ವಿದ್ಯಾನಗರ, ಕೂಳೂರು, ಮಂಗಳೂರು ಇವರ ಒಂದು ವರ್ಷದ ಅವಧಿಯು ಕೊನೆಗೊಂಡಿರುವುದರಿಂದ ಇವರನ್ನು ಸಿಂಡಿಕೇಟ್ ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ ಸದರಿಯವರು ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

ಪ್ರಸ್ತಾವನೆ

1. ಶ್ರೀ ಪ್ರಸನ್ನ ಕುಮಾರ್ ರೈ ಅವರ ನೇತೃತ್ವದ ಸಮಿತಿಯು ವಿಶ್ವವಿದ್ಯಾನಿಲಯದಲ್ಲಿರುವ ವಿವಿಧ ಅಧ್ಯಯನ ಪೀಠಗಳು ಹಾಗೂ ಅಧ್ಯಯನ ಕೇಂದ್ರಗಳ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿ ನೀಡಿದ ವರದಿಯಲ್ಲಿ ಮಾಡಲಾದ ಸಲಹೆ ಸೂಚನೆಗಳು ಅನುಷ್ಠಾನಗೊಂಡಿರುವ ಕುರಿತು ಸಭೆಯು ಪರಾಮರ್ಷೆ ನಡೆಸಿತು. ಅಲ್ಲದೆ ಈ ಪೀಠಗಳು/ಕೇಂದ್ರಗಳು ಮತ್ತಷ್ಟು ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸಲು ಅನುವುವಾಗಲು ಹಾಗೂ ಕೆಲವು ಕೇಂದ್ರಗಳ ಸಂಯೋಜಕರು/ನಿರ್ದೇಶಕರು ದೀರ್ಘಾವಧಿಯಿಂದ ಕಾರ್ಯ ನಿರ್ವಹಿಸುತ್ತಿದ್ದು ಹೆಚ್ಚುವರಿ ಜವಾಬ್ದಾರಿಯಿಂದ ಮುಕ್ತರಾಗಿ ವಿಭಾಗಗಳಿಗೆ ಹಿಂದಿರುಗಲು ಅನುವುಮಾಡಿಕೊಡಲು ಅಲ್ಲದೆ ಆಸಕ್ತ ಉಪನ್ಯಾಸಕರಿಗೆ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಲು ಪೀಠ/ಕೇಂದ್ರಗಳ ಸಂಯೋಜಕರ/ನಿರ್ದೇಶಕರ ಆಡಳಿತಾವಧಿಯನ್ನು ಮೊದಲು ಮೂರು ವರ್ಷಗಳಿಗೆ ನಿಗದಿಗೊಳಿಸುವುದು; ನಂತರ ಸಂಬಂಧಿತ ಸಂಯೋಜಕ ನಿರ್ದೇಶಕರ ಕಾರ್ಯಕ್ಷಮತೆಯ ಆಧಾರದ ಮೇಲೆ ಆಡಳಿತಾವಧಿಯನ್ನು ಹೆಚ್ಚುವರಿ ಎರಡು ವರ್ಷಗಳಿಗೆ ವಿಸ್ತರಿಸುವುದು; ಹಾಗೂ ಗರಿಷ್ಠ ಅವಧಿಯನ್ನು ಐದು ವರ್ಷಗಳಿಗೆ ಮಿತಿಗೊಳಿಸುವುದೆಂದು ನಿರ್ಧರಿಸಲಾಯಿತು. ಈಗಾಗಲೇ ಐದು ವರ್ಷಗಳನ್ನು ಪೂರೈಸಿರುವವರನ್ನು ಬದಲಾಯಿಸಲು ನಿರ್ಧರಿಸಲಾಯಿತು.

ಸಭೆಯು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಇದರ ಪ್ರಾಂಶುಪಾಲರಾದ ಡಾ.ಪಾರ್ವತಿ ಅಪ್ಪಯ್ಯ ಹಾಗೂ ಡಾ.ಕುಮಾರ ಸ್ವಾಮಿಯವರ ಕುರಿತು placement ಸಮಸ್ಯೆಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಿತು. ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ನೀಡಿದರಲ್ಲದೆ ಕೊಡಗು ಜಿಲ್ಲೆಯ ಪೋಲೀಸ್ ಇಲಾಖೆಯು ಈ ಬಗ್ಗೆ ತನಿಖೆ ನಡೆಸುತ್ತಿದ್ದು, ವಿಶ್ವವಿದ್ಯಾನಿಲಯವು ಜಿಲ್ಲೆಯ ಪೋಲೀಸ್ ಅಧೀಕ್ಷಕರಿಗೆ ಪತ್ರಗಳನ್ನು ಬರೆದು ತನಿಖಾ ವರದಿಯನ್ನು ನೀಡುವಂತೆ ಕೋರಿಕೊಂಡಿದೆಯೆಂದೂ ಹಾಗೂ ಈವರೆಗೆ ವರದಿ ಸ್ವೀಕೃತಿವಾಗಿರುವುದಿಲ್ಲವೆಂದೂ ತಿಳಿಸಿದರು. ಡಾ.ಪಾರ್ವತಿ ಅಪ್ಪಯ್ಯ ಅವರ ಆಡಳಿತ

ವೈಖರಿಯ ಕುರಿತು ಉಪನ್ಯಾಸಕರಿಂದ ಒಳಗೊಂಡಂತೆ ಹಲವರಿಂದ ದೂರುಗಳು ಬಂದಿದ್ದು, ಕಾಲೇಜಿನಲ್ಲಿ ಶೈಕ್ಷಣಿಕ ವಾತಾವರಣವು ಹದಗೆಡುತ್ತಿರುವ ಬಗ್ಗೆ ಸದಸ್ಯರು ತೀವ್ರ ಕಳವಳವನ್ನು ವ್ಯಕ್ತಪಡಿಸಿದರು. ಹೀಗಾಗಿ, ಡಾ. ಪಾರ್ವತಿ ಅಪ್ಪಯ್ಯ ಅವರ ಕುರಿತು ಇರುವ ಎಲ್ಲಾ ಆರೋಪಗಳ ಕುರಿತು ಸಮಗ್ರ ತನಿಖೆಯಾಗಬೇಕೆಂದು ಸದಸ್ಯರು ಆಗ್ರಹಿಸಿದರು. ಸದಸ್ಯರ ಕೋರಿಕೆಯಂತೆ, ಪ್ರಾಂಶುಪಾಲರ ವಿರುದ್ಧ ಇರುವ ದೂರುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಮಾನ್ಯ ಕುಲಪತಿಯವರು ಕುಲಸಚಿವರಿಗೆ ಸೂಚಿಸಿದರು.

ಅಲ್ಲದೆ ಮಾನ್ಯ ಕುಲಪತಿಗಳು ಮುಂದಿನ ವಾರ್ಷಿಕ ಘಟಿಕೋತ್ಸವವನ್ನು ಏರ್ಪಡಿಸುವ ಕುರಿತು ಸಭೆಯಲ್ಲಿ ಚರ್ಚಿಸಿದರು. ಸಭೆಯು ವಿಶ್ವವಿದ್ಯಾನಿಲಯವು ನಿಡುವ ಗೌರವ ಡಾಕ್ಟರೇಟ್ ಪದವಿಗೆ ಸಂಭಾವ್ಯ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸಿತ್ತಲ್ಲದೆ ಅದನ್ನು ಮಾನ್ಯ ರಾಜ್ಯಪಾಲರಿಗೆ ತನ್ನ ಶಿಫಾರಸ್ಸುಗಳೊಂದಿಗೆ ರವಾನಿಸಲು ಮಾನ್ಯ ಕುಲಪತಿಯವರನ್ನು ಕೋರಿಕೊಂಡಿತು.

ಸಭೆಯು ಮುಂದುವರಿದು, ವಿಶ್ವವಿದ್ಯಾನಿಲಯ ಕಾರ್ಯಕಾರಿ ಅಭಿಯಂತರರ ಕಾರ್ಯಕ್ಷಮತೆ ಹಾಗೂ ವೈಖರಿಯ ಕುರಿತು ಬರುತ್ತಿರುವ ದೂರುಗಳನ್ನು ಚರ್ಚಿಸಿತು. ಅಲ್ಲದೆ, ವಿಶ್ವವಿದ್ಯಾನಿಲಯದಲ್ಲಿ ಅವರ ಮುಂದುವರಿಕೆಯ ಕುರಿತು ಶೀಘ್ರವಾಗಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಮಾನ್ಯ ಕುಲಪತಿಗಳನ್ನು ಕೋರಿಕೊಂಡಿತು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 13.10.2017ರಂದು ನಡೆದ 2017ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:17(2017)

**ವಿಷಯ :** SERB-DST ಪ್ರಾಜೆಕ್ಟ್, ಭೌತಶಾಸ್ತ್ರ ವಿಭಾಗ – Fluorescence Spectrophotometer ಉಪಕರಣ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ Fluorescence Spectrophotometer ಉಪಕರಣವನ್ನು ¥2,700,000 ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

2. ದಿನಾಂಕ 09.11.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಯನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 18.08.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:1(2017)

**ವಿಷಯ:** ಡಾ. ಜಯರಾಜ ಅಮೀನ್, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 25.11.2017 ರಿಂದ 30.11.2017ರ ವರೆಗೆ Brussels, Belgium ಇಲ್ಲಿ ನಡೆಯುವ Jean Monnet Beinnail Conference ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:2(2017)

**ವಿಷಯ:** ಡಾ. ಮಹಮ್ಮದ್ ಮುಸ್ತಾಕ್, ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 17.10.2017ರಿಂದ 21.10.2017 Orlnado, Florida ಇಲ್ಲಿ ನಡೆದ The International Conference, 67th Annual meeting of American Society ನಲ್ಲಿ ಭಾಗವಹಿಸಿದ್ದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:3(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2014–15ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳು – ಪ್ರಾಧ್ಯಾಪಕರ ಮುಂಬಡ್ತಿಯಲ್ಲಿನ ನ್ಯೂನತೆಗಳ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿಕೊಳ್ಳಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:4(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2014–15ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳು – ಬೋಧಕ ವರ್ಗದವರಿಗೆ ಪಿ.ಹೆಚ್.ಡಿ. ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಭಡ್ತಿ ಮಂಜೂರು ಮಾಡಿದ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಮುಂಗಡ ವೇತನ ಭಡ್ತಿ ಅಥವಾ ಮುಂಗಡ ವಾರ್ಷಿಕ ಭಡ್ತಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಲು ಸಂಬಂಧಿತ ಭೋದಕರಿಗೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.7:5(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2014–15ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳು – ವಿಶ್ವವಿದ್ಯಾನಿಲಯದ ಸೇವೆಯನ್ನು ತೊರೆದ ಪ್ರಾಧ್ಯಾಪಕರಿಂದ ವೇತನ ಕಟಾಯಿಸದಿರುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ವಿಶ್ವವಿದ್ಯಾನಿಲಯದ ನಿಯಮಗಳಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.7:6(2017)

**ವಿಷಯ:** 'ಎ ಶ್ಯಾಮ್‌ರಾವ್ ಫೌಂಡೇಶನ್'ವತಿಯಿಂದ ನಡೆಸಲ್ಪಡುವ ವಿದ್ಯಾ ಸಂಸ್ಥೆಗಳನ್ನು ಶ್ರೀನಿವಾಸ್ ವಿಶ್ವವಿದ್ಯಾನಿಲಯ'ದಲ್ಲಿ ವಿಲೀನಗೊಳಿಸುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಖಾಸಗಿ ವಿಶ್ವವಿದ್ಯಾನಿಲಯಗಳ ಕುರಿತು ಯು.ಜಿ.ಸಿ.ಯ ಹೊಸ ನಿರ್ದೇಶನಗಳನ್ನು ಗಮನದಲ್ಲಿರಿಸಿ ಕೊಂಡು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:** ಸಾ.ಸ.7:7(2017)

**ವಿಷಯ:** IQAC ಸಭೆಯ ನಡಾವಳಿ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ** ಸಾ.ಸ.7:8(2017)

**ವಿಷಯ:** 2016–17ನೇ ಸಾಲಿಗೆ ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್) ಖರೀದಿ ಧಾರಣಾ ಗುತ್ತಿಗೆದಾರರನ್ನು 2017–18ನೇ ಸಾಲಿನ ಪ್ರಕ್ರಿಯೆ ಮುಗಿಯುವವರೆಗೆ ಮುಂದುವರಿಸುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ** ಸಾ.ಸ.7:9(2017)

**ವಿಷಯ:** ವಿಶ್ವವಿದ್ಯಾನಿಲಯದ ಅತಿಥಿಗೃಹಗಳ ಕೊಠಡಿ ದರವನ್ನು ಪರಿಷ್ಕರಿಸುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪರಿಷ್ಕರಿಸಿದ ದರ (ಹವಾನಿಯಂತ್ರಿತ ಕೊಠಡಿ ರೂ.400/–ರ ಬದಲು ರೂ.300/–) ವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:** ಸಾ.ಸ.7:10(2017)

**ವಿಷಯ:** ಎಪ್ರಿಲ್/ಮೇ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ಪುನರ್ ಪರಿಶೀಲಿಸಿ ನೀಡಿದ ವರದಿ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪುನರ್ ಪರಿಶೀಲನಾ ಸಮಿತಿಯ ವರದಿಯನ್ನು ಅಂಗೀಕರಿಸಿ ಮೊದಲು ಹೇರಲಾದ ದಂಡನೆಯನ್ನು ಎತ್ತಿಹಿಡಿಯಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ** ಸಾ.ಸ.7:11(2017)

**ವಿಷಯ:** ದಿನಾಂಕ01.07.2017ರವರೆಗಿನಬಿ.ಎ/ಬಿ.ಎಸ್ಸಿ./ಬಿ.ಕಾಂ./ಬಿ.ಎಸ್.ಡಬ್ಲ್ಯು/ಎಲ್ಎಲ್.ಬಿ./ಬಿ.ಎಡ್./ ಬಿ.ಎ.ಹೆಚ್.ಆರ್.ಡಿ.)/ಬಿ.ಬಿ.ಎಂ./ಬಿ.ಹೆಚ್.ಎಂ./ಬಿ.ಹೆಚ್.ಎಸ್./ಬಿ.ಸಿ.ಎ./ಬಿ.ಎಸ್ಸಿ.ಫ್ಯಾಷನ್/ ಗಾರ್ಮೆಂಟ್ ಡಿಸೈನ್ ಮತ್ತು ಬಿ.ಎಸ್ಸಿ. ಇಂಟೀರಿಯರ್ ಡಿಸೈನ್ ಆ್ಯಂಡ್ ಡೆಕೊರೇಶನ್/ಬಿ.ಪಿ.ಎಡ್./ಬಿ.ಎಸ್ಸಿ. (ಎಫ್.ಎನ್.ಡಿ./ಬಿ.ಎ. ಸೆಕ್ಯೂರಿಟಿ ಆ್ಯಂಡ್ ಡಿಟೆಕ್ಟಿವ್ ಸೈನ್ಸ್ ಪದವಿ ಕೋರ್ಸಿಗೆ ಸಂಬಂಧಿಸಿದಂತೆ ಅಧ್ಯಾಪಕರ ಜೇಷ್ಠತಾ ಪಟ್ಟಿ ಅನುಮೋದನೆ ಕುರಿತು.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:** ಸಾ.ಸ.7:12(2017)

**ವಿಷಯ:** ಸಂಸ್ಕೃತದ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:** ಸಾ.ಸ.7:13(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಪ್ರೊ.ಉದಯ ಬಿ. ಇವರನ್ನು ಮುಂದಿನ ಆದೇಶದವರೆಗೆ ಮುಂದುವರಿಸಲು ಹಾಗೂ ಇನ್ನುಳಿದಂತೆ ಪ್ರಸ್ತಾವಿತ ವಿಭಾಗವಾರು ಶಿಕ್ಷಕರ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:** ಸಾ.ಸ.7:14(2017)

**ವಿಷಯ:** ಪಿಹೆಚ್.ಡಿ. ಪದವಿ ಪ್ರಧಾನ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:** ಸಾ.ಸ.7:15(2017)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ಶಾಶ್ವತ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ/ವಿದ್ಯಾ ಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಕಾಲೇಜು / ವಿದ್ಯಾಸಂಸ್ಥೆಗಳಿಗೆ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:** ಸಾ.ಸ.7:16(2017)

**ವಿಷಯ:** ಕ್ರೀಡೆ/ಎನ್‌ಸಿಸಿ/ಎನ್‌ಎಸ್‌ಎಸ್/ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಲಯ/ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನಡೆಸಲು ರಚಿಸಲಾದ ವಿನಿಯಮದ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ವಿನಿಯಮವನ್ನು ಅನುಮೋದಿಸಲಾಯಿತು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸಲು ಆಯ್ಕೆಯಾದ ವಿದ್ಯಾರ್ಥಿಗಳು ಪುನರ್ ಪರೀಕ್ಷೆಗಳಿಗೆ ಅರ್ಹರಾಗಲು ವಿಶ್ವವಿದ್ಯಾನಿಲಯದ ಪೂರ್ವಾನುಮತಿಯೊಂದಿಗೆ ತೆರಳುವ ಷರತ್ತನ್ನು ವಿನಿಯಮದಲ್ಲಿ ಸೇರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಅಭಿವೃದ್ಧಿ** ಸಾ.ಸ.7:17(2017)

**ವಿಷಯ:** BRNS CRP, CARER-Microwave Digestion System ಉಪಕರಣದ ಬಿಡಿಭಾಗಗಳ ಖರೀದಿ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ದಿನಾಂಕ 29.11.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣದ ಬಿಡಿಭಾಗಗಳನ್ನು €2,983+ಇತರ ವೆಚ್ಚಗಳೊಂದಿಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:** ಸಾ.ಸ.7:18(2017)

**ವಿಷಯ:** ಕೈಗಾರಿಕಾ ರಸಾಯನಶಾಸ್ತ್ರ ವಿಭಾಗ – Rotary Evaporator ಪ್ರಯೋಗಾಲಯ ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:** ಸಾ.ಸ.7:19(2017)

**ವಿಷಯ:** BRNS Project, CARRT – Western Blotting Unit ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ದಿನಾಂಕ 29.11.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ರೂ.2,59,857 ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:** ಸಾ.ಸ.7:20(2017)

**ವಿಷಯ:** ದಿವಂಗತ ಪ್ರೊ.ಎಂ.ಎನ್.ವಿಶ್ವನಾಥಯ್ಯ ಇವರ ಸ್ಮರಣಾರ್ಥ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಕೇಂದ್ರ ತೆರೆಯುವ ಬಗ್ಗೆ ಅಥವಾ ವಿಶ್ವವಿದ್ಯಾನಿಲಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ Lecture Complex ನ ಸೆಮಿನಾರ್ ಹಾಲ್‌ವೊಂದಕ್ಕೆ ಅವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** Lecture Hall Complex ನ ಸೆಮಿನಾರ್ ಸಭಾಂಗಣವೊಂದಕ್ಕೆ ಅವರ ಹೆಸರನ್ನಿಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:** ಸಾ.ಸ.7:21(2017)

**ವಿಷಯ:** ಡಾ.ಜಯಶೀಲ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ ಇವರ ಪಿಂಚಣಿ ವಂತಿಗೆಯನ್ನು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಪಾವತಿಸುವ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಸದರಿಯವರ ಪಿಂಚಣಿ ವಂತಿಗೆಯನ್ನು ವರ್ಗಾಯಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:** ಸಾ.ಸ.7:22(2017)

**ವಿಷಯ:** ಡಾ.ಉಮೇಶ್ ನಾಯ್ಕ, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ವಿಭಾಗದ ವಿದ್ಯಾರ್ಥಿನಿಯರು ನೀಡಿರುವ ದೂರಿನ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ವಿಶ್ವವಿದ್ಯಾನಿಲಯ ತೆಗೆದುಕೊಂಡ ಕ್ರಮವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:** ಸಾ.ಸ.7:23(2017)

**ವಿಷಯ:** ಡಾ.ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು ಮತ್ತು ಡಾ.ಕೃಷ್ಣ ಶರ್ಮ, ಅಧ್ಯಕ್ಷರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿ ಕುರಿತು.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ವಿಚಾರಣಾಧಿಕಾರಿಯವರು ಸಲ್ಲಿಸಿದ ಎರಡೂ ವರದಿಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು. ಡಾ. ಕೃಷ್ಣಶರ್ಮ ಅವರ ಮೇಲಿನ ಆರೋಪವು ಸಾಬೀತಾಗದಿರುವ ಕಾರಣ ಅವರನ್ನು ದೋಷಮುಕ್ತಗೊಳಿಸಲಾಯಿತು. ಡಾ. ಶಾಮಸುಂದರ್.ಜೆ ಇವರ ಮೇಲಿನ ಆರೋಪಗಳು ಸಾಬೀತಾಗಿರುವ ಕಾರಣ ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳ ಪರಿನಿಯಮದಂತೆ ಸದರಿಯವರಿಗೆ ನೋಟೀಸು ಜಾರಿ ಮಾಡಿ ವಿವರಣೆ ಪಡೆದು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:** ಸಾ.ಸ.7:24(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 33ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾದ ಪದವಿ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ ಪ್ರಮಾಣ ಪತ್ರಗಳಲ್ಲಿ ಮುದ್ರಣ ದೋಷಗಳ ಕುರಿತು.

**ಸಭೆಯ ದಿನಾಂಕ: 05.12.2017**

**ನಿರ್ಣಯ:** ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ:** ಸಾ.ಸ.7:25(2017)

**ವಿಷಯ:** 'ಮಹೇಶ್ ಕಾಲೇಜ್ ಆಫ್ ಕಾಮರ್ಸ್ ಆಂಡ್ ಮೆನೇಜ್ ಮೆಂಟ್' ಮಂಗಳೂರು ಕಾಲೇಜಿನ ಹೊಸ ಆಡಳಿತ ಮಂಡಳಿಯ (Change of Management) ಹೆಸರು ಮತ್ತು ವಿಳಾಸ ಬದಲಾವಣೆ ಬಗ್ಗೆ.

**ಸಭೆಯ ದಿನಾಂಕ: 05.12.2017**

**ನಿರ್ಣಯ:** Sidhanth Foundation, No.47, 15th Cross, 3rd Main, Margosa Road, Malleshwaram, Bangalore 560003 ಎಂಬ ಹೊಸ ಆಡಳಿತ ಮಂಡಳಿಗೆ ಬದಲಾಯಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| **ಕುಲಸಚಿವರು** | **ಕುಲಪತಿಗಳು** |